**ದಿನಾಂಕ 26.06.2024 ರಂದು ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ.ಎಸ್.ಕೆ. ವಕೀಲರಿಂದಃ–**

4. ವಾದ ಪತ್ರದ ವಿಷಯ ನನಗೆ ಗೊತ್ತಿರುತ್ತದೆ. ಪ್ರತಿವಾದಿಗಳಿಂದ ರೂ.67,97,126/– ಹಣ ಬಾಕಿ ಇರುತ್ತದೆ. ಬಡ್ಡಿ ಸೇರಿದರೆ ಜಾಸ್ತಿ ಹಣ ಪ್ರತಿವಾದಿಗಳಿಂದ ಬರಬೇಕಾಗಿರುತ್ತದೆ. ಈ ದಾವೆಯನ್ನು ರೂ.1,28,16,076/– ಹಣವನ್ನು ವಸೂಲು ಮಾಡಲು ದಾಖಲು ಮಾಡಲಾಗಿದೆ ಅಂದರೆ ಸರಿ. ಸದರಿ ಹಣ ಮೊತ್ತವನ್ನು ಕೇಳಿ ಪ್ರತಿವಾದಿಗಳಿಗೆ ನೋಟಿಸ್ ಕೊಟ್ಟಿರುವ ಬಗ್ಗೆ ನಮ್ಮ ವಕೀಲರಿಗೆ ಗೊತ್ತಿರುತ್ತದೆ. ಸದರಿ ಮೊತ್ತದ ಬಗ್ಗೆ ನೋಟಿಸ್ ಕೊಟ್ಟಿರುವ ಬಗ್ಗೆ ನಮ್ಮ ವಕೀಲರಿಗೆ ಮಾಹಿತಿ ಕೊಟ್ಟಿದ್ದೇವೆ. ಅದು ನಿಪಿ4 ರಲ್ಲಿ

ಇದೆ. ನಿಪಿ4 ರಲ್ಲಿ ಪ್ರತಿವಾದಿಗಳಿಂದ ರೂ.67,97,126/- ಹಣ ಬಾಕಿ ಇದೆ ಎಂದು ನಮೂದು ಮಾಡಲಾಗಿದೆ ಅಂದರೆ ಸರಿ. ವಾದ ಪತ್ರದಲ್ಲಿ ಕೇಳಿರುವ ಮೊತ್ತವನ್ನು ನೋಟಿಸ್ ನಲ್ಲಿ ನಮೂದು ಮಾಡಿರುವುದಿಲ್ಲ ಅಂದರೆ ಸರಿ.

5. 5 ನೇ ಪ್ರತಿವಾದಿಯನ್ನು ನಾನು ಅವರ ದೆಹಲಿಯ ಕಛೇರಿಯಲ್ಲಿ ನೋಡಿದ್ದೇನೆ. ವಾದಿ ಕಂಪನಿ 2009 ಆಗಸ್ಟ್ ತಿಂಗಳಲ್ಲಿ ಪ್ರಾರಂಭ ಆಗಿದೆ. 2016 ರಿಂದ 1 ನೇ ಪ್ರತಿವಾದಿ ಕಂಪನಿಯ ಪರಿಚಯ ಇರುತ್ತದೆ ಮತ್ತು ಅಂದಿನಿಂದ ಅವರ ಸಂಗಡ ವ್ಯವಹಾರ ಮಾಡುತ್ತಾ ಇದ್ದೇವೆ. ವಾದಿ ಸಂಸ್ಥೆಯು ಮೊದಲು ರನ್ನಿಂಗ್ ಅಕೌಂಟ್ ಹೊಂದಿತ್ತು. 2020 ಅಥವಾ 2021 ರ ಸುಮಾರಿಗೆ ರನ್ನಿಂಗ್ ಅಕೌಂಟ್ ಬಂದ್ ಆಗಿತ್ತು. ವಾದಿ ಸಂಸ್ಥೆ ಮತ್ತು 1 ನೇ ಪ್ರತಿವಾದಿ ಕಂಪನಿಯ ನಡುವೆ ಯಾವುದೇ ಲಿಖಿತ ಕರಾರು ಇರುವುದಿಲ್ಲ ಆದರೆ ಇ-ಮೇಲ್ ಮುಖಾಂತರ ಪಿ.ಓ. ಕಳುಹಿಸುತ್ತಾ ಇದ್ದರು. ಆ ಪ್ರಕಾರ ವಾದಿ ಸಂಸ್ಥೆಯಿಂದ ಸರಕುಗಳನ್ನು ಸರಬರಾಜು ಮಾಡುತ್ತಾ ಇದ್ದೆವು.

6. ವಾದಿ ಸಂಸ್ಥೆಯ ಇ-ಮೇಲ್ ಐಡಿ varunenterprises91@gmail.com ಇರುತ್ತದೆ. ನಿಪಿ17 ನ್ನು ನೋಡುತ್ತಿದ್ದು, ಅದನ್ನು ಸಂಜಯ್ ಕುಮಾರ್ ಎನ್ನುವವರು ಕಳುಹಿಸಿರುತ್ತಾರೆ. ಅವರು 1 ನೇ ಪ್ರತಿವಾದಿಯ ಪರವಾಗಿ ಕಳುಹಿಸಿರುತ್ತಾರೆ. ನಿಪಿ17 ನ್ನು 3 ರಿಂದ 5 ನೇ ಪ್ರತಿವಾದಿಗಳು ಕಳುಹಿಸಿರುವುದಿಲ್ಲ. ಅವರ ಕಛೇರಿಯಿಂದ ಕಳುಹಿಸಲಾಗಿದೆ. ನಿಪಿ9 ರಲ್ಲಿ purchase order ಬಗ್ಗೆ ನಮೂದು ಮಾಡಲಾಗಿದೆ. ನಿಪಿ9 ರಲ್ಲಿ ನಮೂದು ಮಾಡಿರುವ customer order reference ಮತ್ತು purchase order ಎರಡೂ ಒಂದೇ. ನಿಪಿ9 ಕ್ಕೆ ಸಂಬಂಧಪಟ್ಟಂತೆ purchase order ನಿಪಿ19 ರ ಪುಟ ಸಂಖ್ಯೆ 35 ರಲ್ಲಿ ಇರುತ್ತದೆ. 1 ನೇ ಪ್ರತಿವಾದಿ ಕಂಪನಿ ಕೇಳಿರುವ ಪ್ರಕಾರ ವಾದಿ ಸಂಸ್ಥೆಯಿಂದ ಸರಕುಗಳನ್ನು ಸರಬರಾಜು ಮಾಡಿರುವುದಿಲ್ಲ ಅಂದರೆ ಸರಿಯಲ್ಲ.

7. ನಿಪಿ19 ರ ಪುಟ ಸಂಖ್ಯೆ 2 ರಲ್ಲಿ 2464 ಮೀ. ಕೇಬಲ್ ಕಳುಹಿಸಲಾಗಿರುತ್ತದೆ. ನಿಪಿ19 ರ ಪುಟ ಸಂಖ್ಯೆ 2 ರ ಕ್ರಮ ಸಂಖ್ಯೆ 1 ರಲ್ಲಿ ನಮೂದು ಮಾಡಿರುವ ವಿಷಯ ಸರಿ ಇರುತ್ತದೆ. ಸದರಿ ಭಾಗವನ್ನು **ನಿಪಿ19(ಎ)** ಎಂದು ಗುರುತಿಸಲಾಯಿತು. ನಿಪಿ9 ರ ಪ್ರಕಾರ

1978 ಮೀ. ಕೇಬಲ್ ಕೊಟ್ಟಿದ್ದೇವೆ ಅಂದರೆ ಸರಿ. ಅಷ್ಟಕ್ಕೆ ಮಾತ್ರ ಬಿಲ್ ಆಗಿದೆ. 1 ನೇ ಪ್ರತಿವಾದಿ ಕಂಪನಿ ಕೇಳಿರುವಷ್ಟು ಕೇಬಲ್‌ನ್ನು ಕಳುಹಿಸಿರುವುದಿಲ್ಲ ಅಂದರೆ ಸರಿಯಲ್ಲ. ಈ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿ9 ನ್ನು ಈ ದಾವಾದ ಸಲುವಾಗಿ ಸೃಷ್ಟಿ ಮಾಡಲಾಗಿದೆ ಅಂದರೆ ಸರಿಯಲ್ಲ. ನಿಪಿ9 ರ ಪ್ರಕಾರ ಯಾವುದೇ ಕೇಬಲ್‌ನ್ನು 1 ನೇ ಪ್ರತಿವಾದಿ ಕಂಪನಿಗೆ ಸರಬರಾಜು ಮಾಡಿರುವುದಿಲ್ಲ ಅಂದರೆ ಸರಿಯಲ್ಲ.

8. ಡೆಲಿವರಿ ಚಲನ್ ಬರುವುದಿಲ್ಲ ಕಾರಣ ಇನ್ವಾಯಿಸ್‌ನ್ನು ನೀಡಲಾಗಿದೆ. ಇನ್ವಾಯಿಸ್‌ಗಳಲ್ಲಿ ಸಹಿ ಪಡೆಯಲಾಗುತ್ತದೆ ಮತ್ತು ಇ-ಮೇಲ್ ಮುಖಾಂತರ ಮಾಹಿತಿ ನೀಡುತ್ತೇವೆ. ಸರಕುಗಳನ್ನು ಸರಬರಾಜು ಮಾಡಿದ ನಂತರ ಸರಬರಾಜು ಮಾಡಿದವರ ಹತ್ತಿರ ಮೊಹರು ಇದ್ದರೆ ಅವರ ಮೊಹರು ಪಡೆಯುತ್ತೇವೆ. ನಿಪಿ9 ರಲ್ಲಿ ಸಹಿ ಮತ್ತು ಮೊಹರು ಎರಡೂ ಇರುವುದಿಲ್ಲ ಅಂದರೆ ಸರಿ. 1 ನೇ ಪ್ರತಿವಾದಿ ಕಂಪನಿಗೆ ಯಾವುದೇ ಕೇಬಲ್‌ಗಳನ್ನು ಸರಬರಾಜು ಮಾಡಿರುವುದಿಲ್ಲ, ಕಾರಣ ಅವರ ಮೊಹರು ಮತ್ತು ಸಹಿ ಪಡೆದಿರುವುದಿಲ್ಲ ಅಂದರೆ ಸರಿಯಲ್ಲ.

9. 2 ರಿಂದ 5 ನೇ ಪ್ರತಿವಾದಿಗಳ ಸಂಪರ್ಕ ಸಂಖ್ಯೆ ವಾದಿ ಸಂಸ್ಥೆಯಲ್ಲಿ ಇರುತ್ತವೆ. ಅವರ ಸಂಪರ್ಕ ಸಂಖ್ಯೆ ಹೇಳಬಹುದು. 2 ನೇ ಪ್ರತಿವಾದಿಯ ಸಂಪರ್ಕ ಸಂಖ್ಯೆ: 98100 49119, ಉಳಿದ ಪ್ರತಿವಾದಿಗಳ ಸಂಖ್ಯೆ ವಾದಿ ಸಂಸ್ಥೆಯಲ್ಲಿ ಇರುತ್ತವೆ. ನಿಪಿ12 ರಲ್ಲಿ ಇರುವ ಮೊಬೈಲ್ ಸಂಖ್ಯೆ 2 ನೇ ಪ್ರತಿವಾದಿಯದು ಇರುವುದಿಲ್ಲ ಅಂದರೆ ಸರಿ. ಅದು ಸೈಟ್‌ನಲ್ಲಿ ಇರುವವರ ಸಂಖ್ಯೆ ಇರುತ್ತದೆ. ನಿಪಿ12 ರ ಮೇಲೆ 1 ನೇ ಪ್ರತಿವಾದಿಯ ಮೊಹರು ಇರುವುದಿಲ್ಲ. ಅದೇ ರೀತಿ ನಿಪಿ10 ರ ಮೇಲೆ 1 ನೇ ಪ್ರತಿವಾದಿಯ ಮೊಹರು ಇರುವುದಿಲ್ಲ. ಸಹಿಗಳು ಇರುತ್ತವೆ. ನಿಪಿ14 ರ ಮೇಲೆ 1 ನೇ ಪ್ರತಿವಾದಿಯ ಮೊಹರು ಇರುವುದಿಲ್ಲ. ಅದರಲ್ಲಿ ಸಹಿ ಇರುತ್ತದೆ. ಅದು ಅರ್ಬನ್ ಪ್ರಾಜೆಕ್ಟ್ಸ್ ಪ್ರೈವೈಟ್ ಲಿಮಿಟೆಡ್ ಮೊಹರು ಇರುತ್ತದೆ ಅಂದರೆ ಸರಿ.

10. ನಿಪಿ16 ರಲ್ಲಿ ರೂ.2.00 ಲಕ್ಷ ಹಣವನ್ನು ಮುಂಗಡ ಬಾಕಿ ಎನ್ನುವ ಬಗ್ಗೆ ನಮೂದು ಇದೆ ಅಂದರೆ ಸರಿ. ಸಾಕ್ಷಿ ಸ್ವ ಹೇಳಿಕೆ, ಯಾವುದೇ ಹಣ ಕೊಟ್ಟಿರುವುದಿಲ್ಲ ಅಂತ

ಉತ್ತರಿಸುತ್ತಾರೆ. ಈ ರೀತಿ ಹಣ ಬಂದಿದ್ದರೂ ಕೂಡ ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನಿಪಿ16 ಕ್ಕೆ ಸಂಬಂಧಪಟ್ಟಂತೆ ಇನ್ವಾಯಿಸ್ ನಿಪಿ12 ರಲ್ಲಿ ಇದೆ (ಸಾಕ್ಷಿ ಸ್ವ ಹೇಳಿಕೆ, ಭಾಗಶಃ ಕೇಬಲ್ ಗಳನ್ನು ಪೂರೈಸಿಲಾಗಿದೆ). 1 ನೇ ಪ್ರತಿವಾದಿ ಕಂಪನಿ ಕೇಳಿರುವ ಹಾಗೆ ಸಂಪೂರ್ಣ ಸರಕುಗಳನ್ನು ಸರಬರಾಜು ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ಮತ್ತೊಂದು ಇನ್ವಾಯಿಸ್ ನ್ನು ಕಳುಹಿಸಿರುತ್ತೇವೆ.

(**ಈ ಸಮಯದಲ್ಲಿ ಮುಂದಿನ ಪಾಟೀ ಸವಾಲಿಗೆ ಸಮಯ ಕೇಳಿರುತ್ತಾರೆ, ನೀಡಲಾಯಿತು**)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷ್ಯವನ್ನು ಬೆರಳಚ್ಚು ಮಾಡಲಾಯಿತು)

(ಓ.ಹೇ.ಕೇ.ಸ)

84 ನೇ ಅ.ನ.ಸಿ ಮತ್ತು ಸತ್ರ ನ್ಯಾಯಾಧೀಶರು,
ಸಿ.ಸಿ.ಎಚ್–85, ಬೆಂಗಳೂರು.